


### ಹಸಿರು ಜಲಜನಕ

‘ಭೂಮಿಯ ಹಿತಚಿಂತಕ ಹಸಿರು ಜಲಜನಕ’ (ಗುರುರಾಜ್ ಎಸ್. ದಾವಣಗೆರೆ, ನ. 24) ಲೇಖನ ಅತ್ಯುತ್ತಮವಾಗಿತ್ತು. ವೈಜ್ಞಾನಿಕ ಮತ್ತು ಬೋಧಪ್ರದ ವಿಚಾರ ಉಪಯುಕ್ತ.

—ಡಾ. ಎಸ್. ಶಿಶುಪಾಲ, ದಾವಣಗೆರೆ

### ಪರ್ಯಾಯ ಇಂಧನ ಆಗಬಹುದೆ?

ಹಸಿರು ಜಲಜನಕ ಲೇಖನ ಚೆನ್ನಾಗಿದೆ. ಈಗ ಬಳಸುತ್ತಿರುವ ಇಂಧನಗಳಿಗೆ ಪರ್ಯಾಯ ಇದೆಯೇ? ಎಷ್ಟೋ ವರ್ಷಗಳಿಂದ ಪರ್ಯಾಯ ಇಂಧನಗಳ ಬಗ್ಗೆ ಸಂಶೋಧನೆ ನಡೆಯುತ್ತಿದೆ. ಜೈವಿಕ ಮೂಲಗಳಿಂದ ತಯಾರಿಸಿದ ಇಂಧನಗಳು, ವಿದ್ಯುತ್, ಜಲಜನಕ... ಹೀಗೆ ಹಲವು ಬಗೆಯ ಪರ್ಯಾಯಗಳ ಬಗ್ಗೆ ಸಂಶೋಧನೆ ನಡೆದರೂ ಇದುವರೆಗೆ ಪೆಟ್ರೋಲಿಯಂ ಮತ್ತು ಕಲ್ಲಿದ್ದಲನ್ನು ಬಿಟ್ಟು ಪೂರ್ತಿಯಾಗಿ ಬೇರೆ ಇಂಧನಗಳನ್ನು ಬಳಸಲು ಸಾಧ್ಯವಾಗಿಲ್ಲ? ಹಸಿರು ಜಲಜನಕ ಪರ್ಯಾಯ ಇಂಧನ ಆಗಬಹುದೇ? ಕಾಲವೇ ಉತ್ತರ ಕೊಡಬೇಕು.

—ಕೆ. ಗಣೇಶ ರಾಜ, ಬೆಂಗಳೂರು

ಹಸಿರು ಜಲಜನಕದ ಬಳಕೆ ಇಂದಿನ ಪರಿಸ್ಥಿತಿಯಲ್ಲಿ ತುಂಬಾ ಅನಿವಾರ್ಯವಾಗಿದೆ. ನಮ್ಮ ದೇಶದಲ್ಲಿ ದೆಹಲಿ ನಗರ ಮಾಲಿನ್ಯದಿಂದ ನೆಲಕ್ಕೆ ಅಪ್ಪಳಿಸುತ್ತಿರುವಾಗ ಇಂತಹ ಮಾದರಿ ಜಾರಿಗೆ ತಂದು ಶುದ್ಧ ಗಾಳಿಯನ್ನು ಸೇವಿಸಲು ಜನರು ಹಂಬಲಿಸುತ್ತಾರೆ ಎಂಬುದಕ್ಕೆ ಅನುಮಾನವಿಲ್ಲ.

—ವಿವೇಕ್ ಪಿ., ಬೆಂಗಳೂರು

ಹಸಿರು ಜಲಜನಕ ಸಾಕಷ್ಟು ಹೊಸ ಮಾಹಿತಿಯನ್ನು ಒಳಗೊಂಡ, ಯಾವುದೇ ವಿಶ್ವವಿದ್ಯಾಲಯದ ಪಠ್ಯದಲ್ಲಿ ಇರಬೇಕಾದ ಅಪ್ಪಟ ಅಕಡೆಮಿಕ್ ಶೈಲಿಯ ಲೇಖನವಿದು. ಸೋಲಾರ್, ಪವನ ವಿದ್ಯುತ್‌ಗಳನ್ನು ಮೀರಿ, ಇಡೀ ಜಗತ್ತಿನ ಶಕ್ತಿ ಹಸಿವನ್ನು ನೀಗಿಸುವ ತಾಕತ್ತು ಇರುವ ಹಸಿರು ಜಲಜನಕದ ಬಗ್ಗೆ ಲೇಖಕರು ಸರಳವಾಗಿ, ವಿಸ್ತೃತವಾಗಿ ಬರೆದಿದ್ದಾರೆ. ಅಪಾಯ ಮತ್ತು ಮಿತಿಗಳ ಬಗ್ಗೆಯೂ ಹೇಳಿದ್ದಾರೆ.

—ಜ್ಯೋತಿ, ಬೆಂಗಳೂರು

### ವೇಣು ಲೀಲೆಯಲ್ಲಿ ರೋಣು

ಪಂ. ರೋಣು ಮಜುಂದಾರ್ ಸಂದರ್ಶನ (ನ. 24, ಉಮಾ ಅನಂತ್) ನೋಡಿ ಬಹಳ ಖುಷಿಯಾಯಿತು. ಇತ್ತೀಚೆಗಷ್ಟೇ ಬೆಂಗಳೂರಿನ ಚೌಡಯ್ಯಹಾಲ್‌ನಲ್ಲಿ ಅವರ ಬಾನ್ಸುರಿ ವಾದನ ಕೇಳಿ ರೋಮಾಂಚನಗೊಂಡಿದ್ದೆ.

— ಮುರಳಿ, ನಾಗವಾರ

### ಕುಲಾಂತರಿ ಸಾಸಿವೆ



ಕುಲಾಂತರಿ ಸಾಸಿವೆಗೆ (ಸೀಮಾ ಹೆಗಡೆ, ನ. 24) ಕೇಂದ್ರ ಸರ್ಕಾರದ ಸಚಿವಾಲಯದ ಅಸ್ತು ನೀಡಿದ್ದು ಶಾಪವೋ? ಅಥವಾ ವರವೋ ಎನ್ನುವುದನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ಪರಿಣಾಮಕಾರಿಯಾಗಿ ವಿಶ್ಲೇಷಿಸಿ ಉತ್ತಮ ಮಾಹಿತಿಯನ್ನು ಕೊಟ್ಟಿದ್ದಾರೆ.

—ಎಂ.ಆರ್. ಚಂದ್ರಶೇಖರ್

ಕುಲಾಂತರಿ ಸಾಸಿವೆ ‘ಧಾರ ಹೈಬ್ರಿಡ್ 11’ರ ಕುಲಾಂತರ ಮಾಡುವ ವಿಧಾನ ಮತ್ತು ಅದರ ಉಪಯೋಗದ ಬಗೆಗಿನ ವಿವರಗಳನ್ನುಳ್ಳ ಲೇಖನ ಬಹಳ ಉಪಯುಕ್ತವಾದದ್ದು.

—ಛಾಯಾಪತಿ

### ಬಾಲ್ಯಕ್ಕೆ ದೂಡಿದ ‘ಮಂದಹಾಸ’



‘ತೂಕೀತಾ ಇರಿ, ತೂಕೀತಾ ಇರಿ’ (ನಳಿನಿ ಟಿ. ಭೀಮಪ್ಪ, ನ. 24) ‘ಮಂದಹಾಸ’ ಬರಹ ಓದುಗರನ್ನು ಬಾಲ್ಯಕ್ಕೆ ದೂಡಿದ್ದಲ್ಲದೆ ಈಗಿನ ವಾಸ್ತವಿಕತೆಯನ್ನು ಬಿಂಬಿಸಿ ನಗೆ ಪಟಾಕಿ ಸಿಡಿಸುವುದರಲ್ಲಿ ಯಶಸ್ವಿಯಾಗಿದೆ.

—ಭಾರತೀ ಗಂಗಾಧರ್, ಬೆಂಗಳೂರು

### ವಾಸ್ತವತೆಯ ಬಿಂಬ

ಬರಹ ನಗು ತಂದರೂ ವಾಸ್ತವತೆಯನ್ನು ಬಿಂಬಿಸಿತು. ನಾನು ಸಹ ಈ ಬಟ್ಟೆ ಒಣಗಿಸುವ ಕಷ್ಟವನ್ನು ಅನುಭವಿಸುತ್ತಿರುತ್ತೇನೆ. ಒಣಗಿಸುವ ಸ್ಟ್ಯಾಂಡ್‌ಗೆ ಹಾಕಿ ಎಂದಿಗಾದರೂ ಒಣಗಲೆಂದು ಬಿಟ್ಟುಬಿಡುವುದಿದೆ. ಮನುಷ್ಯನಿಗೆ ಅಗತ್ಯಕ್ಕಿಂತ ಹೆಚ್ಚು ಸಂಗ್ರಹಿಸುವ ಬುದ್ಧಿ ಎಂದಿಗೆ ಹೋಗುತ್ತೋ ದೇವರೇ ಬಲ್ಲ.

—ಸುಬ್ಬಲಕ್ಷ್ಮಿ ಹೆಚ್. ಕೆ. ಕೋಲಾರ

### ಕಥೆ ಚೆನ್ನಾಗಿದೆ

‘ನೆಮ್ಮದಿಯ ನಾಳೆಗಳು’ (ಸಿ.ಎನ್.ಮುಕ್ತಾ, ನ. 24) ಕಥೆ ಚೆನ್ನಾಗಿ ಮೂಡಿಬಂದಿದೆ. ಅತ್ತೆ ಸೊಸೆಯರ ಸಂಬಂಧ ಹೇಗಿರಬೇಕೆಂದರೆ ತಾಯಿ ಮಗಳ ಸಂಬಂಧದ ತರಹ ಇರಬೇಕು. ಈ ಸಮಾಜದಲ್ಲಿ ಹೀಗೆ ಇರುವುದು ವಿರಳ.

—ಬಿದರಹಳ್ಳಿ ಚನ್ನವೀರಪ್ಪ ಹಿರೇಹಡಗಲಿ

### ಆರೋಗ್ಯ ಲೇಖನ

‘ಏಕೆ ಅಗತ್ಯ ಆ್ಯಂಟಿಬಯೊಟಿಕ್?’ (ಡಾ. ಕೆ.ಬಿ. ರಂಗಸ್ವಾಮಿ) ಲೇಖನದಲ್ಲಿ ಸೋಂಕಿಗೆ ಅಗತ್ಯವಾದ ಔಷಧಿಗಳ ಬಳಕೆ ಬಗ್ಗೆ ಎಚ್ಚರಿಕೆ ನೀಡಿದ್ದಾರೆ. ವೈದ್ಯರ ಸೂಚನೆ ಮೇರೆಗೆ ಇವುಗಳನ್ನು ಬಳಸಬೇಕು. ಇಲ್ಲದಿದ್ದರೆ ಇವು ಉಪಯುಕ್ತ ಬ್ಯಾಕ್ಟೀರಿಯಾಗಳನ್ನು ನಾಶ ಮಾಡಿ ಇನ್ನೂ ಹೆಚ್ಚಿನ ಅನಾರೋಗ್ಯಕ್ಕೆ ತುತ್ತಾಗುವ ಬಗ್ಗೆ ವಿಷದಪಡಿಸಿದ್ದಾರೆ. ಅಲ್ಲದೆ ಇಂತಿಷ್ಟು ಮಾತ್ರೆಗಳನ್ನು ನಿಗದಿಪಡಿಸಿದ ದಿನಗಳವರೆಗೂ ತೆಗೆದುಕೊಳ್ಳುವ ಬಗ್ಗೆ ಸ್ಪಷ್ಟಪಡಿಸಿದ್ದಾರೆ. ಹಿಂದೆ ಯಾವಾಗಲೋ ಸೂಚಿಸಿದ್ದ ಮಾತ್ರೆಗಳನ್ನು ಪುನಃ ಬಳಸಬಾರದು ಎಂಬುದನ್ನು ವಿವರವಾಗಿ ತಿಳಿಸಿದ್ದಾರೆ.

—ಬಿ.ಕೆ. ಅನ್ನಪೂರ್ಣಾ ದೇವಿ, ಕ್ಯಾತ್ಸಂದ್ರ

### ಬೆಳಕು ಚೆಲ್ಲಿದೆ

ಆರೋಗ್ಯ ಲೇಖನ ಉಪಯುಕ್ತ. ವೈದ್ಯರ ಸಲಹೆ ಪಡೆಯದೆ ಸಾಮಾಜಿಕ ಮಾಧ್ಯಮಗಳ ಸಹಾಯದಿಂದಲೋ ತಮ್ಮ ಸ್ವಂತ ತೀರ್ಮಾನ ತೆಗೆದುಕೊಂಡೋ, ಔಷಧಿ ಅಂಗಡಿಯವರು ಸ್ವತಂತ್ರವಾಗಿ ವೈದ್ಯರ ಚೀಟಿ ಇಲ್ಲದೆ ಮಾತ್ರೆ ಕೊಡುವುದರಿಂದ ಜನರು ಆ್ಯಂಟಿಬಯೊಟಿಕ್‌ಗಳನ್ನು ಉಪಯೋಗಿಸುವುದರಿಂದ ಆಗುವ ಅನಾಹುತಗಳ ಬಗ್ಗೆ ಲೇಖನ ಬೆಳಕು ಚೆಲ್ಲಿದೆ.

—ಮಾಧವ ಉದ್ಯಾವರ್, ಮೈಸೂರು

### ಸಕಾಲಿಕ ಬರಹ

‘ನಿಮ್ಮೊಡನೆ’ಯಲ್ಲಿ ‘ಸರ್ಕಾರಿ ಶಾಲೆಗಳ ಅಪೌಷ್ಟಿಕತೆ ನಿವಾರಿಸಲು ಸಾರ್ವಜನಿಕ ಸಹಭಾಗಿತ್ವ ಕಾಳಜಿಯ ಕಣ್ಣಾಗಲು’ (ರಘುನಾಥ ಚ.ಹ., ನ. 24) ಬರಹ ಸಕಾಲಿಕ. ಸರ್ಕಾರಿ ಶಾಲೆಗಳ ನಿರ್ವಹಣೆ ಸರ್ಕಾರ ಅಲ್ಲದೆ ಪೋಷಕರು ಕೂಡ ಅದಕ್ಕೆ ಹೊಣೆಗಾರರಾಗಬೇಕಾಗಿರುವ ಸತ್ಯ ಸಂಗತಿಯನ್ನು ಎತ್ತಿ ತೋರಿಸಿದ್ದಾರೆ. ಸರ್ಕಾರಿ ಶಾಲೆಗಳ ಬಗ್ಗೆ ಸರ್ಕಾರ ಮತ್ತು ವಿದ್ಯಾ ಸಂಸ್ಥೆಗಳಿಗಿಂತಲೂ ಹೆಚ್ಚು ಮನದಟ್ಟಾಗಬೇಕಿರುವುದು ಪೋಷಕರು ಮಾತ್ರ. ಇದರಿಂದ ಸಾಮಾಜಿಕ ತಾರತಮ್ಯಗಳು ನಿವಾರಣೆಯಾಗಬಹುದು.

—ಬಸಪ್ಪ ಸೊ. ಮುಳ್ಳೂರ, ಹಲಗತ್ತಿ

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in